

ಗುನುಂಗ್ ಪದಾಂಗ್‌ನ ಮೊದಲ ಮಾಳಿಗೆಗೆ ತೆರೆದ ಮೆಟ್ಟಿಲುಗಳು



ಜ್ವಾಲಾಮುಖಿಯ ಕಠಿಣ ಶಿಲೆಗಳ ಪುರಾತನ ಮೆಟ್ಟಿಲುಗಳು

ಬೆಟ್ಟ ಕಣಿವೆಯ ಮೋಹಕ ಹಳ್ಳಿಗಳ ಮೂಲಕ. ಈಗಂತೂ ತಲುಪಿಯೇ ಬಿಡುತ್ತೇವೆ ಎಂಬ ಉತ್ಸಾಹದಲ್ಲಿ ನಾನು ಸೀಟಿನ ತುದಿಗೆ ಕುಳಿತುಕೊಂಡೆ. ಆದರೆ ಮೈಲಿಗಳು ಸರಿದವು, ಹೋಗುತ್ತಲೇ ಇದ್ದೇವೆ. ಕಡೆಗೂ ಅವರುಗಳು ತಂದು ನಿಲ್ಲಿಸಿದರು ದಟ್ಟ ಕಾಡಿನ ನಡುವೆ, ಎದುರಿಗೆ ಏರಿನಿಂತ ಮಣ್ಣಿ ಹಾದಿಯನ್ನು ತೋರಿಸಿದರು.

ಬೃಹತ್ ಮರಗಳ ತಂಪಿನ ಹಾದಿ. ಅಪರಿಚಿತ ಪಕ್ಷಿಗಳ ಮನಮೋಹಕ ಕೂಗು. ಕೊಚ್ಚೆಯಲ್ಲಿ ಕಾಲು ಹೂತು ಹೋಗದಂತೆ, ಬಲು ಎಚ್ಚರಿಕೆಯಿಂದ ಹತ್ತತೊಡಗಿದೆವು. ಸುಮಾರು ಮುಕ್ಕಾಲು ಗಂಟೆ ನಡೆದರೂ ಹಾದಿ ಏರುತ್ತಲೇ ಹೋಗುತ್ತಿದೆ. ಕಡೆಗೊಬ್ಬ ಮನುಷ್ಯ ಕಂಡಾಗ ಕೇಳಿದೆವು. ಆತ ನಾವು ತೋರಿಸಿದ ಚಿತ್ರವನ್ನು ನೋಡಿ, 'ಅರೆ ಇದು ಇಲ್ಲಿಲ್ಲ, ಚಿಯಂಜೂರ್ ಹತ್ತಿರ' ಎಂದ. ಘಳ್ ಎಂದು ಒಡೆಯಿತು ನನ್ನ ಹೃದಯ, ದಡಬಡಿಸಿ ಇಳಿದು ಬಂದೆವು.

ಚಾಲಕ ಡೀಯನ್‌ಗೆ ಹೇಳಿದೆ: 'ಇದು ಚಿವಡೆ ಅಂತೆ, ಗುನುಂಗ್ ಪದಾಂಗ್ ಅಲ್ಲ. ಮತ್ತೆ ತೋರಿಸುತ್ತೇನೆ ನೋಡಿ'.

ಮೊಬೈಲ್‌ನಲ್ಲಿ ಫೋಟೊಗಳನ್ನು, ವಿಡಿಯೊಗಳನ್ನು ಪರಿಪರಿಯಾಗಿ ಈಗ ತೆರೆದು ತೋರಿಸಿದೆ. ಏಕ್‌ದಂ ಜ್ಞಾನೋದಯವಾದಂತೆ ಡೀಯನ್ ನೇರ ಕುಳಿತ, ಜೋರಾಗಿ ತಲೆ ಆಡಿಸಿದ. ಅಬ್ಬ, ಈತನಿಗೆ ಈಗ ಅರ್ಥವಾಗಿದೆ. ಮತ್ತೆ ಗೂಗಲ್‌ನಲ್ಲಿ ಡೆಸ್ಟಿನೇಷನ್ ಹಾಕಿ ಅಗಾಧ ಆತ್ಮವಿಶ್ವಾಸದಲ್ಲಿ ಹೊರಟ. ಮಂಜುಳಾ 'ನಾಲ್ಕೂವರೆಗೆ ಬಾಗಿಲು ಮುಚ್ಚುತ್ತದೆ' ಎಂದು ಮೊಬೈಲ್ ನೋಡುತ್ತಾ ಹೇಳಿದರು. ಗಂಟೆ ಈಗ 1.30 ಆಗಿತ್ತು. ಕಾರು ಹೊರಟಿತು, ಈಗ ಸರಿ ದಾರಿಯಲ್ಲಿ ಹೋಗುತ್ತಿರುವೆವು ಎಂಬ ನನ್ನ ಸಮಾಧಾನ ಹೆಚ್ಚು ಕಾಲ ಉಳಿಯಲಿಲ್ಲ. ಮತ್ತೆ ಬೆಟ್ಟ ಗುಡ್ಡಗಳ ಏರಿಳಿದು, ಹಲವು ಹಳ್ಳಿಗಳನ್ನು ಹಾಯ್ದು ಹೋಗಿಯೇ ಹೋಗುತ್ತಿದ್ದಾರೆ ಡೀಯನ್. ತಮ್ಮ ಮೊಬೈಲ್ ತೋರಿದ ಹಾದಿಯಲ್ಲಿ ಶ್ರದ್ಧೆಯಿಂದ ಅತ್ತಿತ್ತ ತಿರುಗದೆ ನಡೆದ ಆತನನ್ನು 'ಇನ್ನೆಷ್ಟು ಹೊತ್ತು?' ಕೇಳಿದೆ. 'ಫೈವ್ ಸೆಕೆಂಡ್' ಎಂದ. ಅದಾದ ಅರ್ಧ ಗಂಟೆಯ ಮೇಲೆ ಮಂಜುಳಾ ಅದೇ ಪ್ರಶ್ನೆ ಕೇಳಿದರು. 'ಟು ಸೆಕೆಂಡ್' ಎಂದ. ಈತನ ಕಾಲಗಣನೆಯ ಕೌಶಲದ ಬಗ್ಗೆ